**ಇಂದು ದಿ:19-11-2019 ರಂದು ಪಿ.ಡಬ್ಲ್ಯೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸ ಲಾಯಿತು.**

ಪಾಟೀ ಸವಾಲುಃ ಶ್ರೀ. **ವಿ.ವಿ.ಎಂ.** ವಕೀಲರಿಂದ

ಎಂ.ಇ ನಂಃ 281 ನ್ನು ನಾನು ಪ್ರಶ್ನಿಸಿರುವುದಿಲ್ಲ. ನನ್ನ ದೊಡ್ಡಪ್ಪ ಹೊಳಬಸಪ್ಪನಿಗೆ 4 ಜನ ಗಂಡು ಮಕ್ಕಳು ಮತ್ತು 4 ಜನ ಹೆಣ್ಣು ಮಕ್ಕಳು ಇದ್ದು, ಅವರುಗಳು ಎಲ್ಲರೂ ಮೃತಪಟ್ಟಿದ್ದು, ಕೇವಲ ಒಬ್ಬ ಮಗಳು ಮಾತ್ರ ಜೀವಂತ ಇರುತ್ತಾಳೆ ಆಕೆಯನ್ನು ಈ ದಾವೆಯಲ್ಲಿ ಪಕ್ಷಕಾರಳನ್ನಾಗಿ ಮಾಡಿರುವುದಿಲ್ಲ ಎಂದರೆ ನಿಜ. ಯಾವ ಆಸ್ತಿಗಳನ್ನು ಜಂಟಿ ಇಡಲಾಗಿದೆ ಮತ್ತು ಯಾವ ಆಸ್ತಿಗಳನ್ನು ವಿಭಾಗ ಮಾಡಲಾಗಿದೆ ಎಂದು ನನಗೆ ಹೇಳಲಾಗುವುದಿಲ್ಲ. ನನ್ನ ಮದುವೆ 40 ವರ್ಷ ಆಗಿರುತ್ತದೆ. ಹಿಸ್ಸಾ ಕಾಲದಲ್ಲಿ ನಾನು ನನ್ನ ತವರು ಮನೆಯಲ್ಲಿಯೇ ಇದ್ದೆ. ನನ್ನ ತಂದೆ 1969 ರಲ್ಲಿ ಮೃತಪಟ್ಟ ನಂತರ ಖಾತೆ 1 ನೇ ಪ್ರತಿವಾದಿಯ ಹೆಸರಿಗೆ ಆಗಿರುತ್ತದೆ. ಆತನ ಹೆಸರಿಗೆ ಖಾತೆ ಮಾಡಲು ನಾನು ಸಹ ಸಮ್ಮತಿ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನನ್ನ ತಂದೆ ಮೃತಪಟ್ಟ ಒಂದು ವಾರದ ನಂತರ ನಾನು ಹಿಸ್ಸೆ ಕೇಳಿದ್ದೆ, ಆದರೆ ಪ್ರತಿವಾದಿಗಳು ಕೊಡಲು ಆಗುವುದಿಲ್ಲ ಎಂದು ತಿಳಿಸಿದ್ದರು. ಸಾಕ್ಷಿಯು ಮುಂದುವರೆದು ನ್ಯಾಯಾಲಯದಿಂದ ಆದೇಶ ತರುವಂತೆ ತಿಳಿಸಿದ್ದರು ಎಂದು ಉತ್ತರಿಸುತ್ತಾರೆ. ದಿಃ 05-02-1993 ರಲ್ಲಿ ಹೊಳಬಸಪ್ಪ ಮತ್ತು ಸಿದ್ದಪ್ಪನ ವಾರಸುದಾರರುಗಳು ವಿಭಾಗ ಮಾಡಿಕೊಂಡಾಗ ನಾನು ಹೋಗಿರಲಿಲ್ಲ. 05-02-1993 ರಲ್ಲಿ ಮಾಡಿಕೊಂಡ ವಿಭಾಗವು ನನಗೆ ಒಂದು ವರ್ಷದ ನಂತರ ಗೊತ್ತಾಗಿರುತ್ತದೆ. ಎಂ.ಇ ನಂಃ 1176, 588 ಇವುಗಳನ್ನು ನಾನು ಪ್ರಶ್ನಿಸಿರುವುದಿಲ್ಲ. 1993 ರಲ್ಲಿ ಹಿಸ್ಸೆ ಆದಾಗ ದಾವಾದ 1 ರಿಂದ 5 ಮತ್ತು 7 ರಿಂದ 10 ನೇ ಸ್ವತ್ತುಗಳು 1 ನೇ ಪ್ರತಿವಾದಿಗೆ ಬಂದಿರುತ್ತವೆ ಎಂದರೆ ಸಾಕ್ಷಿಯು ಅವರೇ ಮಾಡಿಕೊಂಡಿರುತ್ತಾರೆ ಎಂದು ಉತ್ತರಿಸುತ್ತಾರೆ. ದಿಃ 04-04-1990 ರಲ್ಲಿ ಹಿಸ್ಸೆ ಮಾಡಿಕೊಂಡಾಗ ನಾನು ಹೋಗಿದ್ದೆ ಎಂದರೆ ಸರಿಯಲ್ಲ. 1990 ರಲ್ಲಿ ಮಾಡಿಕೊಂಡ ವಿಭಾಗವು ನನಗೆ 4-5 ತಿಂಗಳುಗಳ ನಂತರ ಗೊತ್ತಾಗಿರುತ್ತದೆ. ದಿಃ 03-09-1993 ರಂದು ವಿಭಾಗ ಮಾಡಿಕೊಂಡಾಗ ನಾನು ಹಾಜರಿದ್ದೆ. ಆದರೆ ನನಗೆ ಹಿಸ್ಸೆ ಕೊಟ್ಟಿರುವುದಿಲ್ಲ. 1993 ರಲ್ಲಿ ಒಂದು ವರ್ಷದ ತನಕ ನನಗೆ ಹಿಸ್ಸೆ ಕೊಡುತ್ತೇನೆ ಎಂದು ತಿಳಿಸಿ ನಂತರ ಕೊಟ್ಟಿರುವುದಿಲ್ಲ. ಡ ನಂ.1134 ಮತ್ತು 1880 ಇವುಗಳನ್ನು ಸಹ ನಾನು ಪ್ರಶ್ನಿಸಿರುವುದಿಲ್ಲ. 1994 ರಲ್ಲಿ ಕೊನೆಯ ಬಾರಿಗೆ ನಾನು ವಿಭಾಗ ಮಾಡಿಕೊಡುವಂತೆ ನಾನು ಕೇಳಿದ್ದೆ ಆ ನಂತರ ನಾನು ಕೇಳಿರುವುದಿಲ್ಲ ಎಂದರೆ ನಿಜ. ಈ ವಿಷಯವನ್ನು ಸಹ ನಾನು ನನ್ನ ವಕೀಲರಿಗೆ ತಿಳಿಸಿರುತ್ತೇನೆ. ನನ್ನ ತಂದೆ 1969 ರಲ್ಲಿ ಮೃತಪಟ್ಟ ನಂತರ 1 ನೇ ಪ್ರತಿವಾದಿಯೇ ದಾವಾ ಸ್ವತ್ತುಗಳ ಸ್ವಾಧೀನಾನುಭವ ಹೊಂದಿಕೊಂಡು ಬಂದಿರುತ್ತಾನೆ ಎಂದರೆ ನಿಜ. 1993 ರ ನಂತವೂ ಸಹ ಡ.ನಂಬರುಗಳು ಆತನ ಹೆಸರಿಗೆ ಮಂಜೂರಾದ ನಂತರವೂ ಸಹ ಆತನೇ ವಹಿವಾಟು ಮಾಡಿಕೊಂಡು ಬಂದಿರುತ್ತಾನೆ ಎಂದರೆ ನಿಜ. ಈ ವಿಷಯವನ್ನು ನಾನು ನನ್ನ ವಕೀಲರಿಗೆ ತಿಳಿಸಿರುತ್ತೇನೆ ಎಂದರೆ ನಿಜ. ದಾವೆ ಸಲ್ಲಿಸುವ ಸಂದರ್ಭದಲ್ಲಿ 1 ನೇ ಪ್ರತಿವಾದಿಯೇ ದಾವಾ ಸ್ವತ್ತುಗಳ ಸ್ವಾಧೀನಾನುಭವ ಹೊಂದಿಕೊಂಡು ಬಂದಿರುವ ವಿಚಾರವನ್ನು ನನ್ನ ವಕೀಲರಿಗೆ ತಿಳಿಸಿರುತ್ತೇನೆ.

2. ಹೊಳಬಸಪ್ಪನ ವಾರಸುದಾರರುಗಳು ಯಾವ ಭಾಗದಲ್ಲಿ ಮತ್ತು 1 ನೇ ಪ್ರತಿವಾದಿ ಯಾವ ಭಾಗದಲ್ಲಿ ವಹಿವಾಟು ಮಾಡುತ್ತಾ ಬಂದಿರುತ್ತಾರೆ ಎಂದು ನನ್ನ ವಾದ ಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ನಿಜ ಜಮೀನುಗಳ ಮತ್ತು ಪಂಚಾಯಿತಿ ಅಸ್ತಿಗಳ ಚಕ್ಕುಬಂದಿ ಸಹ ನಾನು ತಿಳಿಸಿರುವುದಿಲ್ಲ ಎಂದರೆ ನಿಜ. ದಾವಾ ಆಸ್ತಿಗಳ ಪ್ರತ್ಯೇಕ ಕಿಮ್ಮತ್ತನ್ನು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ 4 ಮತ್ತು 10 ನೇ ಅಸ್ತಿಗಳು ಅಂದರೆ ಒಟ್ಟು 3 ಎಕರೆ ಜಮೀನನ್ನು 2 ನೇ ಪ್ರತಿವಾದಿಗೆ ನೀಡಲಾಗಿದೆ ಎಂದರೆ ನಿಜ. ಅದನ್ನು ಅಕೆಗೆ ಸುಮಾರು 10-15 ವರ್ಷಗಳ ಹಿಂದೆಯೇ ಕೊಡಲಾಗಿದೆ. ಡ ನಂಃ 588 ರ ಸ. ನಂಃ 27/2, 74/1 ಅ, 49/1, 67/4 ಸ್ವತ್ತುಗಳನ್ನು ಈ ಪ್ರಕರಣದಲ್ಲಿ ಸೇರಿಸಿರುವುದಿಲ್ಲ ಎಂದರೆ ನಿಜ. ಸ ನಂಃ 49/1, 49/5 ಡ ನಂಃ 588 ರ ಪ್ರಕಾರ 1960 ರಲ್ಲಿಯೇ ನಮುದಾಗಿದೆ ಎಂದರೆ ನಿಜ. ಸ ನಂಃ 49/1 ಸ್ವತ್ತು 1993 ರಲ್ಲಿ ಹಿಸ್ಸೆ ಆದ ನಂತರ 49/5 ಮತ್ತು 49/8 ಎಂದು ಬದಲಾಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ ನಂ. 49 ರ ಪೈಕಿ ಇನ್ನೂ ಒಂದು ಎಕರೆ 39 ಗುಂಟೆ ಸ್ವತ್ತನ್ನು ಈ ಪ್ರಕರಣದಲ್ಲಿ ಸೇರಿಸಿರುವುದಿಲ್ಲ ಎಂದರೆ ನಿಜ. ಆದ್ದರಿಂದ ಈ ದಾವೆ ನಿಲ್ಲತಕ್ಕದ್ದಲ್ಲ ಎಂದರೆ ಸರಿಯಲ್ಲ. 3 ಎಕರೆ ಜಮೀನನ್ನು ಮಾರಾಟ ಮಾಡಿ ನನ್ನ ಮದುವೆ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಗಧಿತ ಕಾಲಾವಧಿಯಲ್ಲಿ ಹಿಸ್ಸೆ ಕೇಳಿರುವುದಿಲ್ಲವಾದ ಕಾರಣ ನನ್ನ ದಾವೆ ನಿಲ್ಲತಕ್ಕದ್ದಲ್ಲ ಎಂದರೆ ಸರಿಯಲ್ಲ. ನನ್ನ ಹಿಸ್ಸೆಯನ್ನು ಹಣ ಮತ್ತು ಬಂಗಾರದ ರೂಪದಲ್ಲಿ ನನ್ನ ಮದುವೆ ಕಾಲದಲ್ಲಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 19-11-2019

ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು